# ಉಡುಪಿ ಜಿಲ್ಲೆ ಭೂಮಾಪನಾ ಶಾಖೆ

**ಅಧಿಕಾರಿಗಳ ವಿವರ**

| ಭೂದಾಖಲೆಗಳ ಉಪನಿರ್ದೇಶಕರು | |
|---|---|
| ಶ್ರೀ ಬಿ.ಕೆ  ಕುಸುಮಾಧರ (K.G.S) | Ph : 0820-(O) 2574924,<br>Email: mojini.ddudupi@gmail.com |

| ಭೂದಾಖಲೆಗಳ ಸಹಾಯಕ ನಿರ್ದೇಶಕರು | |
|---|---|
| ಶ್ರೀ ರವೀಂದ್ರ (B.E) | Ph : 08254-231984<br>Email:adlrkundhapura@gmail.com |

| ಅಧೀಕ್ಷಕರು (ಆ) | | |
|---|---|---|
| ಉಡುಪಿ ಜಿಲ್ಲೆ | ಶ್ರೀ ಹೆಚ್.ಟಿ ನಾಗೇಶ್ | Ph:0820-(O) 2574924,<br>Email: mojini.ddudupi@gmail.com |
| **ಅಧೀಕ್ಷಕರು (ತಾಂ)** | | |
| ಉಡುಪಿ | ಶ್ರೀ ಹೆಚ್.ಟಿ ಪಾಟೀಲ್ | Ph: 9449121547<br>Email: mojini.udupi@gmail.com |
| ಕಾರ್ಕಳ | ಶ್ರೀಮತಿ ಶ್ರೀಕಲಾ | Ph: 9731317800<br>Email: mojini.karkala@gmail.com |

| ಪರ್ಯಾವೇಕ್ಷಕರು | | |
|---|---|---|
| ಉಡುಪಿ | ಶ್ರೀ ದಯಾನಂದ ರಾವ್<br>ಶ್ರೀ ನಾಗೇಶ್ | Ph: 9448251515<br>Ph: 9538457950<br>Email: mojini.udupi@gmail.com |
| ಕುಂದಾಪುರ | ಶ್ರೀ ಪುರುಷೋತ್ತಮ | Ph: 9448409962<br>Email: mojini.kundapura@gmail.com |
| ಕಾರ್ಕಳ | ಶ್ರೀ ಗೋಪಾಲ್ ಎನ್.ವಿ | Ph: 8867703567<br>Email: mojini.karkala@gmail.com |
| ವಿ.ತ ಬ್ರಹ್ಮಾವರ | ಶ್ರೀ ಸುನಿಲ್ ನಟೇಕರ್ | Ph: 9449041447<br>Email: mojini.brahmavara@gmail.com |
| ವಿ.ತ ಬೈಂದೂರು | ಶ್ರೀ ಮಹೇಶ್ ಕುಮಾರ್ | Ph: 9448548436<br>Email: mojini.byandoor@gmail.com |

**ಭೂಮಾಪನಾ ಶಾಖೆಯಲ್ಲಿ ನಿರ್ವಹಿಸಲಾಗುವ ಕಾರ್ಯಗಳ ವಿವರ:**

ಉಡುಪಿ ಜಿಲ್ಲೆ ಹಿಂದಿನ ಮದರಾಸು ಪ್ರಾಂತ್ಯಕ್ಕೆ ಒಳಪಟ್ಟಿದ್ದು ಮದರಾಸು ಭೂಮಾಪನ ಪದ್ಧತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ . ಇಲ್ಲಿ ಗ್ರಾಮ ನಕ್ಷೆ FMB (Field Measurement Book - ಹೊಲನಕ್ಷೆ) ಗಳ ಆದಾರದಲ್ಲಿ ತುಂಡು ಭೂಮಿಗಳನ್ನು ಗುರುತಿಸಿ ಅಳತೆ ಕಾರ್ಯಕ್ಕೈಗೊಳ್ಳಲಾಗುತ್ತಿದೆ. ಭೂಮಾಪನ ಹಾಗೂ ಭೂದಾಖಲೆಗಳ ತಯಾರಿಕಾ ಹಂತವು ಭೂಮಾಪನ ಶಾಖೆಗೆ ಸಂಬಂಧಿಸಿದ್ದು , ಕರ್ನಾಟಕ ಭೂ ಕಂದಾಯ ಅಧಿನಿಯಮ-1964 ಹಾಗೂ ಕರ್ನಾಟಕ ಭೂಕಂದಾಯ ನಿಯಮಾವಳಿ-1966 ರಲ್ಲಿನ ವಿಧಿವಿಧಾನಗಳನ್ವಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಾರೆ. ಜಿಲ್ಲೆಯಲ್ಲಿ ಒಟ್ಟು 77 ಇಲಾಖಾ ಭೂಮಾಪಕರು, 35 ಪರವಾನಿಗೆ ಭೂಮಾಪಕರು, 5 ಇಲಾಖಾ ಬಾಂದು ಜವಾ ನರು ಹಾಗೂ ಹೊರಗುತ್ತಿಗೆ ಆಧಾರದಲ್ಲಿ 30 ಬಾಂದುಜವಾನರು ಕಾರ್ಯನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಜಿಲ್ಲೆಗೆ 68 ಪರವಾನಗಿ ಭೂಮಾಪಕರನ್ನು ಒದಗಿಸುವ ಕುರಿತು ಆಯ್ಕೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.

**ಮೋಜಿಣಿ ತಂತ್ರಾಂಶದಡಿ ನಿರ್ವಹಿಸಲಾಗುವ ವಿವಿಧ ರೀತಿಯ ಅಳತೆಕಾರ್ಯ ಗಳು ಈ ಕೆಳಗಿನಂತಿವೆ.**

**11-ಇ:** ಕ್ರಯ, ಭೂ-ಪರಿವರ್ತನೆ, ವಿಭಾಗ, ದಾನ, ನ್ಯಾಯಾಲಯದ ಪ್ರಕರಣ, ತತ್ಕಾಲ್ ಪೋಡಿ, ಇತರೆ ಯಾವುದೇ ಪೋಡಿ ಕೆಲಸಕ್ಕೆ ಸಂಬಂಧಿಸಿದಂತೆ ಮಾನ್ಯ ಸರಕಾರದ ಅಧೀನ ಕಾರ್ಯದರ್ಶಿ ಕಂದಾಯ ಇಲಾಖೆ ( ಭೂಮಾಪನಾ) ಕರ್ನಾಟಕ ಸರ್ಕಾರದ ಸಚಿವಾಲಯ , ಬಹುಮಹಡಿಗಳ ಕಟ್ಟಡ ಬೆಂಗಳೂರು . ಇವರ ತಿದ್ದುಪಡಿ ಆದೇಶ ಸಂಖ್ಯೆ ಕಂ .ಇ.10.ಭೂದಾಸ 2014.ದಿನಾಂಕ:17/02/2014 ರನ್ವಯ 11-ಇ ನಕ್ಷೆ ಶುಲ್ಕ ಈ ಕೆಳಗಿನಂತೆ ನಿಗಧಿಪಡಿಸಲಾಗಿದೆ.

**ನಗರ ಪ್ರದೇಶಕ್ಕೆ** : ಅ) 11-ಇ ಮತ್ತು ಅಲಿನೇಷನ್ ಪೂರ್ವ ನಕ್ಷೆಗೆ ವಿಸ್ತೀರ್ಣ 2 ಎಕ್ರೆವರೆಗೆ ರೂ-2000/- 2 ಎಕ್ರೆಗೆ ಮೇಲ್ಪಟ್ಟು ಪ್ರತೀ ಭಾಗಶಃ ಎಕ್ರೆಗೆ ರೂ-200/-

ಆ) ವಿಭಾಗ ಪತ್ರ ಸಂಬಂಧ 11-ಇ ನಕ್ಷೆಗೆ ಪ್ರತೀ ಸರ್ವೆ ನಂಬರಿಗೆ ರೂ-1200/- ಪ್ರತೀ ಹೆಚ್ಚುವರಿ ಸರ್ವೆ ನಂಬರಿಗೆ (ವಿಸ್ತೀರ್ಣ ಅನ್ವಯಿಸುವುದಿಲ್ಲ) ರೂ-100/-

**ಗ್ರಾಮೀಣ ಪ್ರದೇಶಕ್ಕೆ**: ಅ) 11-ಇ ಮತ್ತು ಅಲಿನೇಷನ್ ಪೂರ್ವ ನಕ್ಷೆಗೆ ವಿಸ್ತೀರ್ಣ 2 ಎಕ್ರೆವರೆಗೆ ರೂ-1200/- 2 ಎಕ್ರೆಗೆ ಮೇಲ್ಪಟ್ಟು ಪ್ರತೀ ಭಾಗಶಃ ಎಕ್ರೆಗೆ ರೂ-100/

ಆ) ವಿಭಾಗ ಪತ್ರ ಸಂಬಂಧ 11-ಇ ನಕ್ಷೆಗೆ ಪ್ರತೀ ಸರ್ವೆ ನಂಬರಿಗೆ ರೂ-1000/- ಪ್ರತೀ ಹೆಚ್ಚುವರಿ ಸರ್ವೆ ನಂಬರಿಗೆ (ವಿಸ್ತೀರ್ಣ ಅನ್ವಯಿಸುವುದಿಲ್ಲ) ರೂ-100/-ಗರಿಷ್ಟ-ರೂ2500/- ಗಳಿಗೆ ಮಿತಿಗೊಳಿಸಲಾಗಿದೆ. 11-ಇ ನಕ್ಷೆಗಾಗಿ ಸಂಬಂಧಿಸಿದ ನಾಡಕಛೇರಿಯಲ್ಲಿ ಅರ್ಜಿದಾರರು ತಮ್ಮ (ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಭಾವಚಿತ್ರವಿರುವ ನಿರ್ದಿಷ್ಟಪಡಿಸಿರುವ ಗುರುತಿನ ಚೀಟಿ) ಯೊಂದಿಗೆ ನಿಗಧಿಪಡಿಸಿರುವ ಶುಲ್ಕ ಭರಿಸಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

- **ಹದ್ದುಬಸ್ತು:** ಸರ್ವೆದಾಖಲೆಗಳ ಆಧಾರದ ಮೇಲೆ ಜಮೀನಿನಲ್ಲಿ ಗಡಿಗುರುತುಗಳನ್ನು ಪುನಃ ಸ್ಥಾಪಿಸಲು ಮಾಡುವ ಅಳತೆಕಾರ್ಯ . ಹದ್ದುಬಸ್ತು ಅಳತೆ ಕುರಿತು ಪ್ರತೀ ಸರ್ವೆ ನಂಬರ್ / ಸಬ್ ಡಿವಿಜನ್ ನಂಬರ್ ಗೆ 35/- ರೂ ಅರ್ಜಿ ಶುಲ್ಕ , ನೋಟೀಸು ಫೀಸು ಪ್ರತೀ ಬಾಜೂದಾರರಿಗೆ 25/- ರೂ ಭರಿಸಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ . ಭೂಮಾಪಕರು ನಿ ರ್ವಹಿಸಿದ ಹದ್ದುಬಸ್ತು ಅಳತೆಕಾರ್ಯದಲ್ಲಿ ಅಸಮಧಾನವಿದ್ದಲ್ಲಿ, ಕ.ಭೂ.ನಿ 1966 ರ ನಿಯಮ 139 ರಡಿಯಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ಇವರ ಕಛೇರಿಯಲ್ಲಿ 100/- ರೂ ಭರಿಸಿ ಮೊದಲನೇ ಮೇಲ್ಮನವಿ ಸಲ್ಲಿಸಬಹುದಾಗಿರುತ್ತದೆ . ಹಾಗೂ ಈ ಹಂತದಲ್ಲಿಯೂ ಅಸಮಧಾನ ಇದ್ದಲ್ಲಿ ಭೂದಾಖಲೆಗಳ ಉಪನಿರ್ದೇಶಕರ ಕಛೇರಿಯಲ್ಲಿ 150/- ರೂ ಭರಿಸಿ 2 ನೇ ಮೇಲ್ಮನವಿ ಸಲ್ಲಿಸಬಹುದಾಗಿರುತ್ತದೆ.
- **ಅಲಿನೇಷನ್ ಪೂರ್ವ ನಕ್ಷೆ** : ಎಲ್ಲಾ ಭೂಪರಿವರ್ತನೆ ಪ್ರಕರಣಗಳಿಗೆ ನಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ . ವಾಸ್ತವ್ಯದ ಉದ್ದೇಶಕ್ಕೆ 0.15 ಎಕ್ರೆಗಿಂತ ಕಡಿಮೆ ವಿಸ್ತೀರ್ಣದ ಪ್ರತಿಯೊಂದು ಭೂಪರಿವರ್ತನೆ ಅರ್ಜಿಗೆ 300/-ರೂ ನಿಗದಿಪಡಿಸಲಾಗಿರುತ್ತದೆ. 0.15 ಎಕ್ರೆ ಮೀರಿದ ವಾಸ್ತವ್ಯ ಭೂಪರಿವರ್ತನಾ ಪ್ರಕರಣಗಳಲ್ಲಿ ಹಾಗೂ ಎಲ್ಲಾ ರೀತಿಯ ವಾಣಿಜ್ಯ ಭೂಪರಿವರ್ತನೆ ಅರ್ಜಿಗಳಿಗೆ 1200/- ರೂ ಪಾವತಿಸಿ ಮೋಜಿಣಿ ತಂತ್ರಾಂಶದ ಮೂಲಕ 11-ಇ ಅರ್ಜಿ ಸಲ್ಲಿಸಬಹುದಾಗಿರುತ್ತದೆ.
- **ತತ್ಕಾಲ್ ಪೋಡಿ :** ತತ್ಕಾಲ್ ಪೋಡಿ ಯೋಜನೆಯು ಮ್ಯುಟೇಷನ್ ಪೋಡಿ ಪ್ರಕರಣಗಳಿಗೆ ಸಂಬಂಧಿಸಿದ್ದು , ತ್ವರಿತ ಪೋಡಿಗಾಗಿ ಈ ಯೋಜನೆಯಡಿ ಅವಕಾಶವಿದೆ . ಈ ಯೋಜನೆಯ ಪ್ರಮುಖ ಅಂಶವೆಂದರೆ ಅರ್ಜಿದಾರರು ಸಲ್ಲಿಸಿದ ಅರ್ಜಿಯು ಸಮರ್ಪಕವಾಗಿದ್ದಲ್ಲಿ 30 ದಿನಗಳೊಳಗೆ ಅಳತೆ ಕಾರ್ಯ ಪೂರೈಸಬೇಕು ಹಾಗೂ ತಕರಾರು ಇದ್ದಲ್ಲಿ 60 ದಿನಗಳ ಒಳಗಾಗಿ ಪೋಡಿ ಕೆಲಸ ಪೂರೈಸಬೇಕಾಗಿರುತ್ತದೆ.
- **ದರಖಾಸ್ತು ಪ್ರಕರಣ :** ದರಖಾಸ್ತು ಪೋಡಿ ಪ್ರಕರಣಗಳಲ್ಲಿ ನಮೂನೆ 1 ರಿಂದ 5 ನ್ನು ಭರ್ತಿ ಮಾಡಿ ಉಪವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪನಿರ್ದೇಶಕರಿಂದ ದೃಢೀಕರಣವಾದ ನಂತರ ಅಳತೆ ಮತ್ತು ದುರಸ್ತಿಕಾರ್ಯ ಪೂರೈಸಲಾಗುವುದು . ಸದರಿ ಪ್ರಕರಣದಲ್ಲಿ ಸರ್ವೆ ನಂಬರಿನ ಪೂರ್ಣ ವಿಸ್ತೀರ್ಣ ಹಾಗೂ ಎಲ್ಲಾ ಮಂಜೂರಿದಾರರಿಗೆ ಕಡ್ಡಾಯವಾಗಿ ಅಳತೆಕಾರ್ಯ ಪೂರೈಸುವ ಕುರಿತು ಮಾನ್ಯ ಸರ್ಕಾರದ ಆದೇಶವಾಗಿರುತ್ತದೆ. ಅಗತ್ಯ ಅನಿವಾರ್ಯ ಪ್ರಸಂಗವಿದ್ದಲ್ಲಿ ಮಾತ್ರ ಏಕವ್ಯಕ್ತಿ ಕೋರಿಕೆಯಡಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

➢ **ಪೋಡಿ ಮುಕ್ತ ಅಭಿಯಾನ ಸರಕಾರದ ಉಚಿತ ಯೋಜನೆ :** ಮಾನ್ಯ ಆಯುಕ್ತರು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: SSLR/TNL/Misc/Mis-182/2014-15 ದಿನಾಂಕ:03.09.2015. ರಂತೆ ಜಿಲ್ಲೆಯಾದ್ಯಂತ ದಿನಾಂಕ :14-09-2015 ರಿಂದ ಅಳತೆಕಾರ್ಯವನ್ನು ಪ್ರಾರಂ ಭಿಸಲಾಗಿರುತ್ತದೆ. ಆಯ್ಕೆ ಮಾಡಲಾದ ಗ್ರಾಮಗಳಲ್ಲಿರುವ ಅಂಶಿಕ ಹಾಗೂ ಬಹುಮಾಲೀಕತ್ವದ ಪಹಣಿಗಳ ಕುರಿತು ಅಳತೆಯಿಂದ ಏಕಮಾಲೀಕತ್ವದ ಪಹಣಿಗಳನ್ನಾಗಿ ಪರಿವರ್ತಿಸಲಾಗುತ್ತದೆ . ಮಾನ್ಯ ಸರಕಾರವು ಈ ಅಭಿಯಾನವನ್ನು ಜನಹಿತಕ್ಕಾಗಿ ಉಚಿತವಾಗಿ ಹಮ್ಮಿಕೊಂಡಿರುತ್ತದೆ. ಕಾರಣ ಸದರಿ ಅಳತೆಕಾರ್ಯಕ್ಕೆ ಹಿಡುವಳಿದಾರರು ಅಳತೆ ಕುರಿತು ಶುಲ್ಕ ಭರಿಸುವ ಅವಶ್ಯಕತೆ ಇರುವುದಿಲ್ಲ. ಭೂಮಾಪಕರು ಅಳತೆಗೆಂದು ಭೇಟಿ ನೀಡಿದಾಗ ಹಿಡುವಳಿದಾರರು ತಮ್ಮ ಹಿಡುವಳಿ ಭೂಮಿ ಕುರಿತು ಮಾಹಿತಿಯನ್ನು ನೀಡಿ ಅಳತೆಗೆ ಸಹಕಾರ ಒದಗಿಸಬೇಕಾಗಿರುತ್ತದೆ.

➢ **ಮೇಲ್ಮನವಿ:** ಯಾವುದೇ ಪೋಡಿ ಪ್ರಕರಣಗಳಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರುರವರು ಮಾಡುವ ಆದೇಶಗಳ ವಿರುದ್ಧ 1 ನೇ ಮೇಲ್ಮನವಿಯನ್ನು ಕ.ಭೂ.ಅ 1964 ರ ಕಲಂ 49 (ಎ) ರಂತೆ ಭೂದಾಖಲೆಗಳ ಉಪನಿರ್ದೇಶಕರಿಗೆ ಸಲ್ಲಿಸಬಹುದಾಗಿರುತ್ತದೆ. ಮೊದಲನೇ ಮೇಲ್ಮನವಿ ಆದೇಶದ ವಿರುದ್ಧವಾಗಿ ಕ .ಭೂ.ಅ 1964 ರ ಕಲಂ 50 ರನ್ವಯ ಜಿಲ್ಲಾಧಿಕಾರಿಯವರಲ್ಲಿ 2 ನೇ ಮೇಲ್ಮನವಿಯನ್ನು ಸಲ್ಲಿಸಬಹುದಾಗಿರುತ್ತದೆ.

➢ **ತಿದ್ದುಪಡಿ:** ಮೋಜಿಣಿಯಾಗಿರುವ ಪ್ರಕರಣಗಳಲ್ಲಿ ಲಿಪಿಕ ತಪ್ಪುಗಳು , ಗಣಿತದ ತಪ್ಪುಗಳಾಗುವ ಸಂದರ್ಭಗಳಲ್ಲಿ , ಸದರಿ ತಪ್ಪು ಸರಿಪಡಿಸಲು ಭೂದಾಖಲೆಗಳ ಉಪನಿರ್ದೇಶಕರು ಇವರ ಕಛೇರಿಯಲ್ಲಿ ಕರ್ನಾಟಕ ಭೂಕಂದಾಯ ನಿಯಮಗಳು 1966 ನಿಯಮ 36(i) ರಲ್ಲಿ ಅವಕಾಶ ಇರುತ್ತದೆ.

➢ **ಭೂಮಾಪನಾ ಕಛೇರಿಯಿಂದ ದೊರೆಯಬಹುದಾದ ದೃಢೀಕೃತ ನಕಲು ಹಾಗೂ ಅದಕ್ಕೆ ವಿಧಿಸುವ ಶುಲ್ಕ**

1. ಎಫ್.ಎಂ.ಬಿ ನಕ್ಷೆ ಪ್ರತಿ ( ಪ್ರತೀ ಹಿಸ್ಸೆಗೆ 7/- ರೂ)
2. ಪಕ್ಕಾ ನಕಲು (ಪ್ರತೀ ಶೀಟಿಗೆ 25/- ರೂ)
3. ಟಿಪ್ಪಣಿ ಪ್ರತಿ (ಪ್ರತೀ ಶೀಟಿಗೆ 6/-ರೂ)
4. ಆಕಾರಬಂದು ನಕಲು ( ಪ್ರತೀ ಹಿಸ್ಸೆಗೆ 15/- ರೂ)
5. ಗ್ರಾಮ ನಕಾಶೆ (ರೂ 30/- ರಿಂದ ರೂ 242/- ರವರೆಗೆ/ ನಕಾಶೆಯ ಅಳತೆಗನುಗುಣವಾಗಿ)

**2016-17 ನೇ ಸಾಲಿನ ಸಾಧನೆ:**

| ಮೋಜಿಣಿ ತಂತ್ರಾಂಶ(1+2) ರಲ್ಲಿ 11-ಇ ನಕ್ಷೆ ಕೋರಿ ಬಂದ ಅರ್ಜಿಗಳು | | | | | |
|---|---|---|---|---|---|
| ಮಾಹೆ | ಪ್ರಾ. ಶಿಲ್ಕು | ಸ್ವೀಕೃತಿ | ಒಟ್ಟು | ವಿಲೆ | ಬಾಕಿ |
| ಏಪ್ರಿಲ್-2016 | 14804 | 1651 | 16455 | 1224 | 15231 |
| ಮೇ-2016 | 15231 | 1910 | 17141 | 2358 | 14783 |
| ಜೂನ್-2016 | 14783 | 1874 | 16657 | 2033 | 14624 |
| ಜುಲೈ-2016 | 14624 | 1776 | 16400 | 1888 | 14512 |
| ಆಗಸ್ಟ್-2016 | 14512 | 1891 | 16404 | 2439 | 13965 |
| ಸೆಪ್ಟೆಂಬರ್-2016 | 13965 | 1713 | 15678 | 1798 | 13880 |
| ಒಟ್ಟು | 14804 | 10815 | 25619 | 11740 | 13880 |

**ಪೋಡಿ ಮುಕ್ತ ಅಭಿಯಾನದಡಿ ಸಾಧಿಸಿದ ಪ್ರಗತಿ**

| ಮಾಹೆ | ಅಡವಿ ಕಾರ್ಯ (ಬ್ಲಾಕ್‌ಗಳಲ್ಲಿ) | ದುರಸ್ತಿ ಕಾರ್ಯ (ಬ್ಲಾಕ್‌ಗಳಲ್ಲಿ) | ಒಟ್ಟು |
|---|---|---|---|
| ಎಪ್ರಿಲ್-2016 | 1629 | 1227 | 2856 |
| ಮೇ-2016 | 1563 | 1588 | 3151 |
| ಜೂನ್-2016 | 1595 | 980 | 2575 |
| ಜುಲೈ-2016 | 1841 | 1428 | 3269 |
| ಆಗಸ್ಟ್-2016 | 1773 | 934 | 2707 |
| ಸೆಪ್ಟೆಂಬರ್-2016 | 1224 | 1175 | 2399 |
| **ಒಟ್ಟು** | **9625** | **7332** | **16957** |

ಹೆಚ್ಚಿನ ಮಾಹಿತಿಯನ್ನು ಭೂಮಾಪನ ಕಂದಾಯ ವ್ಯವಸ್ಥೆ ಹಾಗೂ ಭೂದಾಖಲೆಗಳ ಇಲಾಖೆ ಬೆಂಗಳೂರು ಇವರ ಈ ಕೆಳಗಿನ ವೆಬ್‌ಸೈಟ್‌ಗಳಿಂದ ಪಡೆಯಬಹುದಾಗಿರುತ್ತದೆ.

***Website Id: www.bhoomojini.karnataka.gov.in, http://202.138.105.11***